ಅಧ್ಯಕ್ಷರು :— ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಮುಂದೆ ಮಾನ್ಯ ಎಸ್.ಎಸ್. ಪಾಟೀಲ್ ಅವರ ವಿಚಾರ

ಶ್ರೀ ಹಂಪನಗೌಡ ಬಾದರ್ಲಿ :— ನನ್ನದೂ ಒಂದು ರಿಚಾರ ಇದೆ. ನಿನ್ನೆ ಕೊಟ್ಟಿದ್ದೇನೆ.

ಅಧ್ಯಕ್ಷರು :— ನಿಮಗಿಂತ ಅವರು ಕೊಟ್ಟು ಒಂದು ವಾರ ಆಗಿದೆ. ನಿನ್ನೆ ಕೊಟ್ಟಿದ್ದು ಈ ವಾರ ಬರುವುದಿಲ್ಲ. ಎರಡು ಮೂರು ದಿವಸ ಆದ ಮೇಲೆ ಬರುತ್ತದೆ. ಒಂದು ದಿವಸಕ್ಕೆ 6-7 ವಿಷಯ ತೆಗೆದುಕೊಳ್ಳುತ್ತಿದ್ದೇವೆ. ಇವತ್ತು ಕೊಟ್ಟು ಇವತ್ತೆ ತೆಗೆದುಕೊಳ್ಳಬೇಕೆಂದರೆ ಆಗುವುದಿಲ್ಲ ಸ್ವಲ್ಪ ತಡೆಯಿರಿ. ನಿಮಗಿಂತ ಮೊದಲು ಕೊಟ್ಟವರು ಬೇಕಾದಷ್ಟು ಜನ ಇದ್ದಾರೆ. ನಾನು ದಿನಾಂಕದ ಪ್ರಕಾರ, ಸಿನಿಯಾರಿಟಿ ಪ್ರಕಾರ ಹೋಗುತ್ತೇನೆ.

ಶ್ರೀ ಪಿ.ಎಚ್. ಪೂಜಾರ್ :— ನಾವು ಒಂದು ವಾರದ ಕೆಳಗೆ ಕೊಟ್ಟಿದ್ದೇವೆ.

ಶ್ರೀ ಹಂಪನಗೌಡ ಬಾದರ್ಲಿ :— ನಾವು 18ನೇ ತಾರೀಖು ಕೊಟ್ಟಿದ್ದೇವೆ.

(ಗೊಂದಲ)

ವಿಷಯ: (೧) ಗದಗ್ ಜಿಲ್ಲೆಗೆ ವೈದ್ಯಕೀಯ ಕಾಲೇಜು ಮಂಜೂರು ಮಾಡಿರುವ ಬಗ್ಗೆ

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಗದಗ್ ಜಿಲ್ಲೆಗೆ ಒಂದು ತೋಂಟದಾರ್ಯ ಎಜ್ಯುಕೇಷನ್ ಸೋಸೈಟಿಯವರು ಮೆಡಿಕಲ್ ಕಾಲೇಜು ಬೇಕು ಎಂದು ಕೇಳಿದ್ದರು. ಅದು ಸುಮಾರು ಎರಡು ಮೂರು ವರ್ಷದಿಂದ, ಹಿಂದಿನ ಸರ್ಕಾರ ಇದ್ದಾಗಲೂ ರೆಕ್ಕೆಂಡ್ ಮಾಡಿತ್ತು. ಆದರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಮಾನ್ಯ ಆರೋಗ್ಯ ಸಚಿವರಿಗೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಅದನ್ನು ಈಗಾಗಲೇ ಮಂಜೂರು ಮಾಡಿದ್ದಾರೆ ಏದು ನನಗೂ ಕೂಡ ಮೊನ್ನೆ ಆದರ ಬಗ್ಗೆ ಪತ್ರ ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಿಂದ ಬಂದಿದೆ. ಆ ಕಾರಣದಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಬಹಳ ಮಹತ್ವದ ವಿಚಾರ ಇನ್ನೊಂದು ಇದೆ. ಅದೇನೆಂದರೆ ಹೆಣ್ಣುಮಕ್ಕಳಿಗೆ ತೊಂದರೆ ಆಗುವುದು ಆಮೇದೆ ಈ ಸದನದ ಹಕ್ಕಿನ ವಿಚಾರ

ಅಧ್ಯಕ್ಷರು :— ನೀವು ಈ ಸಬ್ಜೆಕ್ಟ್‌ನ್ನು ನಾಳೆ ರೈಸ್ ಮಾಡಿ, ಅಥವಾ ನಾಡಿದ್ದು ನಿಮ್ಮ ಸೀನಿಯಾರಿಟಿ ಪ್ರಕಾರ ಮಾಡಿ.

ವಿಷಯ: (ಈ) ಸದನದ ಸದಸ್ಯರ ಹಕ್ಕುಬಾಧ್ಯತೆಯನ್ನು ಮೇಲ್ಮನೆಯಲ್ಲಿ ಚರ್ಚೆ ಮಾಡುವ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್ :— ಸದನದ ನಾಯಕರು ಬಂದಿದ್ದಾರೆ. ಈ ಸದನದ ಹಕ್ಕು ಬಾಧ್ಯತೆ ಚರ್ಚೆ ಮಾಡಲು ಅಲ್ಲಿ ಅವಕಾಶ ಇದೆ ಎನ್ನುವುದನ್ನು ಹೇಳುತ್ತಿದ್ದೇನೆ. ಅದನ್ನು ಇವತ್ತು ದಯವಿಟ್ಟು ತಾವು ತೆಗೆದುಕೊಳ್ಳಬೇಕು. ನಾನು ಬೇರೆಯವರನ್ನೂ ಒಪ್ಪಿಸುತ್ತೇನೆ. ಏಕೆಂದರೆ ಈ ಸದನದ ಹಕ್ಕು ಬಾಧ್ಯತೆಯನ್ನು ಚರ್ಚೆ ಮಾಡುವ ಅಧಿಕಾರ ಅವರಿಗೆ ಇದೆ.? ಸದಸ್ಯರ ಹಕ್ಕುಬಾಧ್ಯತೆಗಳನ್ನು ಆ ಸದನದಲ್ಲಿ ಚರ್ಚೆ ಮಾಡಿದ್ದಾರೆ. ತಾವು ಕೂಡ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳಬೇಕು.

Mr. Speaker :— I have no comments on other House

ಶ್ರೀ ಪಿ.ಎಸ್. ಪೂಜಾರ್ :— ಸಾರ್ ಬಾಗಿಲಕೋಟೆ ಮುಳುಗಡೆಯಾಗುತ್ತಿದೆ.

ಅಧ್ಯಕ್ಷರು :— ತಾವು ದಯವಿಟ್ಟು ಕುಳಿತುಕೊಳ್ಳಿ. ಈಗ ಸೀನಿಯಾರಿಟಿ ಬಿಟ್ಟು ಹೋಗುವುದಾ? ದಯವಿಟ್ಟು ಹೇಳಿ. ಅವಕಾಶ ಕೊಡೋಣ.

ಶ್ರೀ ಆರಗ ಜ್ಞಾನೇಂದ್ರ :— ಬಾಗಲಕೋಟೆಯಲ್ಲಿ ನೀರು ಸೀನಿಯಾರಿಟಿ ಪ್ರಕಾರ ಮುಳುಗುತ್ತದೋ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಬಾಗಲಕೋಟೆ ಮುಳುಗಡೆಯಾಗುತ್ತಿರುವ ಬಗ್ಗೆ ನೀವು ಸೀನಿಯಾರಿಟಿ ಪ್ರಕಾರ ಕೊಡಿ. ಆದರೆ ಯಾವುದು ತುರ್ತು ಇದೆ ಎನ್ನುವುದು ತಾವು ಗಮನಕ್ಕೆ ತೆಗೆದುಕೊಳ್ಳಿ. ಅಲ್ಲಿ ಬಾಗಲಕೋಟೆ ಮೂಳುಗಲು ಹೊರಟಿದೆ. ಹಿನ್ನೀರು ಬಂದು ಮುಳುಗುತ್ತಿದೆ. ಹಾಗಾದರೆ ನಾರು ಇನ್ನೊಂದು ವಾರ ತೆಗೆದುಕೊಳ್ಳೋಣವೇ? ಬಾಗಲಕೋಟೆ ಜನ ಹಾಗೆಯೇ ಇನ್ನೊಂದು ವಾರ ಮುಳುಗಡೆ ಆಗಿ ಇರು ಎಂದು ಹೇಳೋಣವೇ? ಮುಳುಗಡೆ ಆಗಿ ಹೋಗುತ್ತದೆ. ಅದನ್ನು ಪರಿಗಣನೆ ಮಾಡಬೇಕು.

ಅಧ್ಯಕ್ಷರು :— ಆಯಿತು, ಅವಕಾಶ ಕೊಡೋಣ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) :— ಮಾನ್ಯ ಅಧ್ಯಕ್ಷರೆ, ಇವತ್ತು ರಾಷ್ಟ್ರೀಯ ಕ್ರೀಡೆಗಳ ವಿಚಾರದಲ್ಲಿ ಮಾತನಾಡಲು ನಾನು ಸೂಚನೆ ಕೊಟ್ಟಿರುವುದು.